

# ಬಿಹು ಕುಹು ಕುಹು

**ಅಸ್ಸಾಂನ ಬಿಹು ನೃತ್ಯ ಗಿನ್ನೆಸ್ ದಾಖಲೆ ಪುಸ್ತಕ ಸೇರುವ ತವಕದಲ್ಲಿದೆ; ದಾಖಲೆಯ ಹೆಜ್ಜೆಗಳ ಮೂಲಕ ಅಂತರರಾಷ್ಟ್ರೀಯ ಗಮನಸೆಳೆಯುವ ಪ್ರಯತ್ನದಲ್ಲಿದೆ.**

■ ಶ್ರೀನಿವಾಸ ಜೋಕಟ್ಟೆ

ಬಿಹು ಎಂದಕೂಡಲೇ ನೃತ್ಯಪ್ರಿಯರಿಗೆ ಕುಹು ಎಂದೇ ಕೇಳಿಸುತ್ತದೆ. ಹಾಗಿದೆ ಅದರ ಲಾಲಿತ್ಯ. ಈ ಬಿಹು ಅಸ್ಸಾಂ ರಾಜ್ಯದ ಸಾಂಸ್ಕೃತಿಕ ಅಸ್ಮಿತೆ. ಬಿಹು ಎಂದೊಡನೆ ಅಸ್ಸಾಮೀಯರ ಮೈಮನಗಳಲ್ಲಿ ಪುಳಕ.

ಬಿರುಬಿಸಿಲಿನ ಏಪ್ರಿಲ್ ಬಿಹು ಸಂಭ್ರಮದ ತಿಂಗಳು. ಬಿಸಿಲ ಧಗೆಯನ್ನು ನೃತ್ಯದ ಲಾಲಿತ್ಯ ತಂಪುಗೊಳಿಸಲಿ ಎನ್ನುವ ಕಾರಣಕ್ಕಾಗಿಯೋ ಏನೋ ಬಿಹುವಿಗೂ ಏಪ್ರಿಲ್‌ಗೂ ನಂಟು. ಗಾನ–ನಾಟ್ಯಗಳ ರಸಧಾರೆ ಈ ಕಲೆ. ಅಸ್ಸಾಮಿ ಆಸಾಮಿಗಳ ಜೀವನೋತ್ಸಾಹ ಹಾಗೂ ಕಲಾವಂತಿಕೆಯ ಸುಂದರ ಅಭಿವ್ಯಕ್ತಿ. ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಆಯಾಮಗಳೂ ಈ ನೃತ್ಯಕ್ಕಿವೆ. ಮನುಷ್ಯ ಮತ್ತು ಪ್ರಾಣಿಗಳ ಹಿತದ ಆಶಯವೂ ಬಿಹುವಿಗಿದೆ.

ಬಿಹು ಈಗ ಸುದ್ದಿಯಲ್ಲಿದೆ. ಅಸ್ಸಾಂನ ಬೊಹಾಗ್ ಬಿಹು ನೃತ್ಯ ಗಿನ್ನೆಸ್ ಮನೆಯ ಕದ ತಟ್ಟುತ್ತಿದೆ. ಏಪ್ರಿಲ್ 14ರಂದು ಗಿನ್ನೆಸ್ ದಾಖಲೆ ಮಾಡಲು ಸಜ್ಜಾಗಿದೆ. ಅಸ್ಸಾಂ ಸರ್ಕಾರವೇ ಈ ದಾಖಲೆ ನೃತ್ಯದ ನೇತೃತ್ವ ವಹಿಸುತ್ತಿದೆ. ಒಂದೇ ಸ್ಥಳದಲ್ಲಿ ಬೃಹತ್ ಪ್ರಮಾಣದ ಬಿಹು ನೃತ್ಯದೊಂದಿಗೆ ಇತಿಹಾಸ ಸೃಷ್ಟಿಸಲು ನೃತ್ಯಗಾರರು ತರಬೇತಿ ಪಡೆದಿದ್ದಾರೆ.

11,140 ನೃತ್ಯಗಾರರು ಮತ್ತು ಡ್ರಮ್ಮರ್‌ಗಳು ಗುವಾಹಟಿಯ ಸುರಸಜ್ಜೆ ಕ್ರೀಡಾಂಗಣದಲ್ಲಿ ಏಪ್ರಿಲ್ 14ರಂದು ಪ್ರದರ್ಶನ ನೀಡಲಿದ್ದಾರೆ. 2022ರಲ್ಲಿ ಅಸ್ಸಾಂ ಪರ್ಯಟನ ವಿಭಾಗವು ಐದು ಸಾವಿರ ನೃತ್ಯಗಾರರನ್ನು ಒಳಗೊಂಡು ಏಕಕಾಲಕ್ಕೆ ಮೈದಾನವೊಂದರಲ್ಲಿ ಬಿಹು ನೃತ್ಯ ಪ್ರದರ್ಶನ ನಡೆಸಿತ್ತು. ಈಗ ದುಪ್ಪಟ್ಟು ಕಲಾವಿದರು ಬಿಹು ಕುಹು ಪಸರಿಸಲು ಸಜ್ಜಾಗಿದ್ದಾರೆ. ಈ ಮೂಲಕ ಭಾರತದ ಸಾಂಪ್ರದಾಯಿಕ ನೃತ್ಯ ಪ್ರಕಾರದ ಬೃಹತ್ ಪ್ರದರ್ಶನ ಗಿನ್ನೆಸ್ ದಾಖಲೆ ಪುಟ ಸೇರುತ್ತಿದೆ.

ಅಸ್ಸಾಮೀಯರು ವರ್ಷದಲ್ಲಿ ಮೂರು ಸಲ 'ಬಿಹು' ಹೆಸರಿನ ಹಬ್ಬ ಆಚರಿಸುತ್ತಾರೆ. ರೊಂಗಾಲಿ ಅಥವಾ ಬೊಹಾಗ್ (ಏಪ್ರಿಲ್), ಕಟಿ ಅಥವಾ ಕೊಂಗಾಲಿ (ಅಕ್ಟೋಬರ್), ಮಾಗ್ ಅಥವಾ ಭೋಗಾಲಿ (ಜನವರಿ) – ಬಿಹುವಿನ ಈ ಮೂರು ಹಬ್ಬಗಳು 'ಕೃಷಿ ಕ್ಯಾಲೆಂಡರ್'ನ ವಿಭಿನ್ನ ಹಂತವನ್ನು ಗುರುತಿಸುತ್ತದೆ. ಅಸ್ಸಾಮೀಯರ ಹೊಸ ವರ್ಷದ ಆರಂಭ ಹಾಗೂ ವಸಂತ ಕಾಲದ ಬರುವಿಕೆ ಬೊಹಾಗ್ ಮೂಲಕ ಆರಂಭವಾಗುತ್ತದೆ. ಆ ಸಂಭ್ರಮವನ್ನು ಏಪ್ರಿಲ್ 14ರಂದು ಬೃಹತ್ ರೂಪದಲ್ಲಿ ಆಚರಿಸಲಾಗುತ್ತಿದೆ.

ಈ ಸಲದ ಗಿನ್ನೆಸ್ ದಾಖಲೆಯಾಗಲಿರುವ ಬೊಹಾಗ್ ಬಿಹು ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಭಾರತದ ಎಲ್ಲ ರಾಜ್ಯಪಾಲರು, ಮುಖ್ಯಮಂತ್ರಿಗಳು ಹಾಗೂ 'ಜಿ20' ದೇಶಗಳ ಮತ್ತು ಆಗ್ನೇಯ ಏಷ್ಯಾದ ದೇಶಗಳ ರಾಯಭಾರಿಗಳು ಭಾಗವಹಿಸಲಿದ್ದಾರೆ ಎನ್ನಲಾಗಿದೆ. ಬಿಹು ನೃತ್ಯವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಜನಪ್ರಿಯಗೊಳಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹೇಳಿದ್ದಾರೆ.

'ನಮ್ಮ ಪ್ರಯತ್ನವು ಒಂದೇ ಸ್ಥಳದಲ್ಲಿ ಅತಿ ದೊಡ್ಡ ಬಿಹು ನೃತ್ಯ ಪ್ರದರ್ಶನ ಆಯೋಜಿಸುವುದು ಮತ್ತು ಅದನ್ನು ಗಿನ್ನೆಸ್ ವಿಶ್ವದಾಖಲೆಗೆ ಸೇರಿಸುವುದಾಗಿದೆ. ಪ್ರಸ್ತುತ ಈ ದಾಖಲೆ ಹಿಮಾಚಲದ ಕುಲು ಪ್ರದೇಶದಲ್ಲಿನ ಪಾರಂಪರಿಕ ನಾಟಿ ಹೆಸರಿನ ನೃತ್ಯದ್ದಾಗಿದೆ. 9892 ಮಂದಿ ಭಾಗವಹಿಸಿದ್ದ ಆ ದಾಖಲೆಯನ್ನು ಮೀರಿಸಲು ನಾವು ಬಯಸುತ್ತೇವೆ' ಎಂದು ಹಿಮಂತ ಶರ್ಮಾ ಹೇಳಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in